೧೨. ರಾಜ್ಯದಲ್ಲಿ ಕೆ.ಇ.ಬಿ.ಯವರು ವಿದ್ಯುತ್‌ಗೆ ಬಿಲ್ ಮಾಡುತ್ತಿರುವಾಗ ಗ್ರಾಹಕರಿಗೆ ಹಿಂದಿನ ಬಾಕಿಯ ಮೇಲೆ ಶೇ. ೨ಳಿರಷ್ಟು ಬಡ್ಡಿ ಹಾಕಿರುವ ಬಗ್ಗೆ.

ಶ್ರೀಮತಿ ಮನೋರಮಾ ಮಧ್ವರಾಜ್ (ಉಡುಪಿ).—ಗ್ರಾಹಕರು ಉಪಯೋಗಿಸಿದ ವಿದ್ಯುತ್‌ಗೆ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯವರು ಬಿಲ್ ಮಾಡುತ್ತಿರುವ ವಿಧಾನ ಅದೊಂದು ದೊಡ್ಡ ಅದ್ವಾನ. ಯಾವ ಯಾವ ತಿಂಗಳಿನ ಅಥವಾ ಅವಧಿಯ ಹಿಂದಿನ ಬಾಕಿ ಎಂದು ತೋರಿಸದೆ ಕಡಿಮೆ ಬಿಲ್ ಆದದ್ದು ಅಥವಾ ಆಡಿಟ್‌ನಲ್ಲಿ ಕಡಿಮೆ ಬಿಲ್ಲಿಂಗ್ ಎಂದು ಕಂಡು ಬಂದದ್ದು ಎಂದು ನಮೂದಿಸಿ ಬಿಲ್ ಮಾಡಲಾಗುತ್ತಿದೆ. ಸಂಬಂಧಪಟ್ಟ ಪುಸ್ತಕಗಳಲ್ಲಿ ಸಮರ್ಪಕ ದಾಖಲೆ ಇಲ್ಲದಿರುವಂಥಾದ್ದು, ಆದರೆ ಲೆಡ್ಜರ್‌ಗಳನ್ನು ಪೂರ್ತಿಗೊಳಿಸಲು ತಿಂಗಳುಗಟ್ಟಲೆ ಬಾಕಿ ಇರುವುದೇ ಗ್ರಾಹಕರ ಪಾವತಿಯನ್ನು ಬಹುದೀರ್ಘಕಾಲ 'ಸಸ್ಪೆನ್ಸ್' ಲೆಕ್ಕದಲ್ಲಿ ಕಾಣಿಸಿರುವುದು, ಯಾವ ಅವಧಿಗೆ ಬಾಕಿ ಎಂಬುದರ ಸ್ಪಷ್ಟ ನಮೂದನೆ ಇಲ್ಲದಿರುವುದು ಇವೆಲ್ಲ ಕೆ.ಇ.ಬಿ.ಯ ವ್ಯವಹಾರದ ಮೇಲೆ ಗ್ರಾಹಕ ಸಮುದಾಯವೇ ಸಂಶಯ ಪಡುವಂತಾಗಿದೆ. ವಿಶ್ವಾಸ ಕಳೆದುಕೊಳ್ಳುವಂತಾಗಿದೆ. ಹಿಂದಿನ ಬಾಕಿಯ ಮೇಲೆ ಗ್ರಾಹಕರಿಂದ ಶೇಕಡ ೨ಳಿರ ದರದಲ್ಲಿ ಬಡ್ಡಿ ವಸೂಲು ಮಾಡುವ ಕೆ.ಇ.ಬಿ. ತನ್ನಿಂದ ಗ್ರಾಹಕರಿಗೆ ಮರುಪಾವತಿ ಆಗಬೇಕಾದ ಹಣದ ಮೇಲೆ ಸಹ ಶೇಕಡ ೨ಳಿರ ಬಡ್ಡಿ ನೀಡಬೇಕಾದುದು ನ್ಯಾಯ ಹಾಗೂ ಧರ್ಮ ಆ ದೆ. ಆದಕ್ಕೆ ವಿರುದ್ಧವಾಗಿ ವರ್ತಿಸುತ್ತಿರುವುದು 'ನ್ಯಾಯಪಾಲನೆ' ಹಾಗೂ 'ನ್ಯಾಯದ ಕರಿತು ಸಮಾನತೆ'ಯನ್ನು ಅಪಹೇಳನ ಮಾಡಿದಂತಾಗಿದೆ. ಮನಬಂದಂತೆ ಬಿಲ್ ಮಾಡುವುದನ್ನು ನಿಲ್ಲಿಸಬೇಕು, ಗ್ರಾಹಕರಿಗೆ ಬಡ್ಡಿ ನೀಡಬೇಕು ಎಂದು ಒತ್ತಾಯಿಸುತ್ತೇನೆ.

ಶ್ರೀ ಲಕ್ಷ್ಮೀನರಸಿಂಹಯ್ಯ (ರಾಜ್ಯ ವಿದ್ಯುತ್ ಸಚಿವರು).—ಕರ್ನಾಟಕ ವಿದ್ಯುಚ್ಛಕ್ತಿ ಮಂಡಲಿಯಲ್ಲಿ ಸುಮಾರು ೪ರಿ ಲಕ್ಷಕ್ಕೂ ಮೀರಿದ ವಿವಿಧ ಬಗೆಯ ಗ್ರಾಹಕರಿದ್ದಾರೆ, ಪ್ರತಿ ವರ್ಷವೂ ೩ ಲಕ್ಷಕ್ಕೂ ಮೀರದಂತೆ ವಿವಿಧ ವರ್ಗದ ಹೊಸ ಗ್ರಾಹಕರ ಸೇರ್ಪಡೆಯಾಗುತ್ತಿದೆ. ಪ್ರತಿಯೊಬ್ಬರಿಗೂ ಬೇರೆ ಬೇರೆ ಖಾತೆ ಇಡಲಾಗಿದೆ ಪ್ರತಿ ವರ್ಗದವರಿಗೂ ವಿಧಿಸುವ ವಿದ್ಯುತ್ ಶುಲ್ಕ ಬೇರೆ ಬೇರೆಯಾಗಿದೆ ಇಷ್ಟು ದೊಡ್ಡ ಸಂಖ್ಯೆಯ ಗ್ರಾಹಕರ ಬಿಲ್ಲನ್ನು ತಯಾರಿಸುವಾಗ ತಪ್ಪು-ದೋಷಗಳುಂಟಾಗುವ ಸಾಧ್ಯತೆ ಇದೆ. ಈ ದೋಷ-ತಪ್ಪುಗಳಿಗೆ ಮುಂಖ್ಯ ಕಾರಣಗಳು ತಪ್ಪು ವಿದ್ಯುತ್ ದರಗಳ ಅನ್ವಯಣೆ ಲೆಕ್ಕಾಚಾರದಲ್ಲಿ ತಪ್ಪುಗಳಾಗುವುದು ಇತ್ಯಾದಿ.

ಈ ಹಿಂದೆ ಸಿಬ್ಬಂದಿ ನೇಮಕಾತಿಗೆ ನಿಷೇಧವಿದ್ದುದರಿಂದ ಅಗತ್ಯವಾದಷ್ಟು ಸಿಬ್ಬಂದಿಯಿಲ್ಲದೆ ರೆವಿನ್ಯೂ ಶಾಖೆಯಲ್ಲಿನ ಸಿಬ್ಬಂದಿಗಳ ಕೆಲಸದ ಹೊರೆ ಹೆಚ್ಚಾಯಿತು. ಕೆಲಸದ ಹೊರೆ ನಿಗದಿತ ಹೊರೆಗಿಂತಲೂ ಅಧಿಕವಾಯಿತು. ಇದರಿಂದಾಗಿ ಬಿಲ್ ತಯಾರಿಕೆಯಲ್ಲಿ ದೋಷ ಉಂಟಾಯಿತು. ಹೊಸ ಗ್ರಾಹಕರ ಖಾತೆ ತೆರೆಯುವಲ್ಲೂ ಸಿಬ್ಬಂದಿ ಕೊರತೆಯಿಂದ ವಿಳಂಬ ಉಂಟಾಗಿ ತಾತ್ಕಾಲಿಕ ಬಿಲ್ಲುಗಳನ್ನು ನೀಡಲಾಗುತ್ತಿತ್ತು, ಖಾತೆ ತೆರೆದ ಹಾಗೆಲ್ಲಾ ಅಂತಿಮ ಬಿಲ್ಲುಗಳನ್ನು ನೀಡಲಾಯಿತ್ತು ಬಿಲ್ಲು ತಯಾರಿಕೆಯಲ್ಲಿನ ಲೋಪದೋಷಗಳು ಲೆಕ್ಕ ಪರಿಶೋಧನೆಯ ಕಾಲದಲ್ಲಿ ಗುರುತಿಸಲ್ಪಟ್ಟು, ಕಡಿಮೆ ಬಿಲ್ಲು ಮಾಡಿದ್ದ ಹಣ ಲೆಕ್ಕ ಹಾಕಿ ಅದನ್ನು ಮಾಹಿಯಾನ ಬಿಲ್ಲುಗಳಲ್ಲಿ ಸೇರಿಸಲಾಗುತ್ತಿದೆ. ಇದಕ್ಕೆ ಆಡಿಟ್ ಷಾರ್ಟ್ ಕ್ಲೈಮ್ ಎಂದು ಬಿಲ್ಲಿನಲ್ಲಿ ನಮೂದಿಸಲಾಗುತ್ತಿದೆ. ಮಾಹಿಯಾನ ಬಿಲ್ಲು ತಯಾರಿಕೆಯ ವೇಳೆಯಲ್ಲಿ ಕೆಲವೊಂದು ಸಲ ತಪ್ಪು ವಿದ್ಯುತ್ ದರದ ಅನ್ವಯಣೆಯಿಂದ, ಮೀಟರ್ ದೋಷದಿಂದ ಗಣನೆಗೆ ತೆಗೆದುಕೊಳ್ಳಬೇಕಾದ ಸರಾಸರಿ ವಿದ್ಯುತ್ ಬಳಕೆ ಪ್ರಮಾಣದಲ್ಲಿನ ತಪ್ಪಿನಿಂದಾಗಿ, ಲೆಕ್ಕಾಚಾರದ ತಪ್ಪಿನಿಂದಾಗಿ ಕಡಿಮೆ ಹಣಕ್ಕೆ ಬಿಲ್ಲು ತಯಾರಿಸಲಾಗಿದ್ದು ಮುಂದೆ ಹಾಗೆ ಕಡಿಮೆ ಬಿಲ್ಲಿರುವ ಹಣ ಗುರುತಿಸಿ ಅದನ್ನು ಷಾರ್ಟ್‌ಕ್ಲೈಮ್ ಎಂದು ಮಾಹಿಯಾನ ಬಿಲ್ಲಿನಲ್ಲಿ ನಮೂದಿಸಿ ಸೇರಿಸಲಾಗುತ್ತಿದೆ.

ಲೆಡ್ಜರ್ ಖಾತೆಗಳನ್ನು ನಿರ್ವಹಿಸುವವರಿಗೆ ಮಂಡಳಿಯಲ್ಲಿ ತರಬೇತಿ ನೀಡಲಾಗುತ್ತಿದೆ. ಈಗ ನೇಮಕಾತಿಯ ಮೇಲೆ ನಿಷೇಧ ಸಡಿಲಿಸಿದ್ದು ರೆವಿನ್ಯೂ ಶಾಖೆಗೆ ಹೆಚ್ಚು ಸಿಬ್ಬಂದಿ ನೇಮಕ ಮಾಡಲಾಗಿದ್ದು ಪರಿಸ್ಥಿತಿ ತುಂಬಾ ಉತ್ತಮಗೊಂಡಿದೆ. ಗ್ರಾಹಕರು ಬಿಲ್ಲಿನ ಹಣದ ಬಗ್ಗೆ ಮಂಡಳಿ ಕಛೇರಿಯಲ್ಲಿ ಸಮಾಧಾನಿಸಿ ಪಡೆಯಲು ವ್ಯವಸ್ಥೆಯಿದೆ. ಮಂಡಳಿ ದೋಷರಹಿತ ಬಿಲ್ಲನ್ನು ನೀಡಲು ಸದಾ ಪ್ರಯತ್ನಿಸುತ್ತಿದೆ. ಬಾಕಿ ಹಣಕ್ಕೆ ಬಿಲ್ಲಿನಲ್ಲೇ ವಿವರ ನೀಡಲು ಸಾಧ್ಯವಿಲ್ಲದ್ದರಿಂದ ಅವರು ವಿವರಗಳನ್ನು ಮಂಡಳಿ ಕಛೇರಿಯಲ್ಲಿ ಪಡೆಯಬೇಕು.

ಮಂಡಳಿ ಗ್ರಾಹಕರಿಂದ ಬರಬೇಕಾದ ಕಾಲ ಮೀರಿದ ಪಾವತಿಗೆ ಬಡ್ಡಿ ವಿಧಿಸುತ್ತದೆ. ಮಂಡಳಿಯೂ ಸಹ ಗ್ರಾಹಕರು ಮಂಡಳಿಯಲ್ಲಿಟ್ಟಿರುವ ವಿದ್ಯುತ್ ಬಳಕೆಯ ಬಗೆಗಿನ ಠೇವಣಿ ಹಣದ ಮೇಲೆ ಶೇಕಡಾ ೧೦ರಷ್ಟು ಬಡ್ಡಿ ನೀಡುತ್ತದೆ ಇದು ೧೦-೦೦ ಮತ್ತು ಅದಕ್ಕೆ ಮೀರಿದ ಮೊತ್ತಗಳಿಗೆ ಮಾತ್ರ ಅನ್ವಯಿಸಿದ್ದು ಇದು ದಿನಾಂಕ ೧-೨-೧೯೮೬ ರಿಂದ ಜಾರಿಗೆ ಬಂದಿದೆ. ಈ ಬಡ್ಡಿ ಹಣವನ್ನು ಗ್ರಾಹಕರ ಬಿಲ್ಲಿನ ಹಣಕ್ಕೆ ಸರಿಹೊಂದಿಸಿಕೊಳ್ಳಲಾಗುತ್ತದೆ.

೧೩. ಮೈಸೂರು ಜಿಲ್ಲೆಯಲ್ಲಿ ಗ್ರಾಮಲೆಕ್ಕಿಗರ ಹುದ್ದೆಗಳು ಖಾಲಿ ಇರುವುದು

ಶ್ರೀ ಎಂ ಶಿವಣ್ಣ (ಹೆಗ್ಗಡದೇವನಕೋಟೆ) —ಮೈಸೂರು ಜಿಲ್ಲೆಯಲ್ಲಿ ಅನೇಕ ಗ್ರಾಮ ಲೆಕ್ಕಿಗ ಹುದ್ದೆಗಳು ಖಾಲಿ ಇದ್ದು, ಇದರಿಂದ ಜಿಲ್ಲೆಯಲ್ಲಿ ತೊಂದರೆಯುಂಟಾಗುತ್ತಿದೆ ಎಂದು ತಿಳಿದ ನಂತರ ಈ ಹುದ್ದೆಗಳ ನೇಮಕಾತಿಗಾಗಿ ಅರ್ಜಿಗಳನ್ನು ಕರೆದು ಸಂದರ್ಶನ ಮಾಡಲಾಯಿತು ಸಂದರ್ಶನವಾಗಿ ಒಂದು ವರ್ಷವಾಯಿತು. ಸಂದರ್ಶನಕ್ಕೆ ಹಾಜರಾಗಿ ಬಂದ ಸಾವಿರಾರು ಅಭ್ಯರ್ಥಿಗಳು ನೇಮಕಾತಿ ಆಜ್ಞೆ ಬರಬಹುದೆಂದು ಕಾಯುತ್ತಾ ಕುಳಿತ್ತಿದ್ದಾರೆ. ದಿನಬೆಳಿಗಾದರೆ ಸಂಬಂಧಿಸಿದವರನ್ನು ಕೇಳುತ್ತಿದ್ದಾರೆ ಆದರೆ ಉತ್ತರ ಶೂನ್ಯವಾಗಿದೆ.

ಖಾಲಿ ಇರುವ ಹುದ್ದೆಗಳನ್ನು ಕೂಡಲೇ ಭರ್ತಿ ಮಾಡಲಾಗುವುದಾಗಿ ಸಚಿವರು ಈ ಸದನದಲ್ಲಿಯೇ ಹೇಳಿದ್ದರೂ ಸಹ ಇದುವರೆವಿಗೆ ನೇಮಕಾತಿಯಾಗಲಿಲ್ಲ, ಮಂಡಲ ಪಂಚಾಯಿತಿಗಳ ರಚನೆ ನಂತರ ಗ್ರಾಮಲೆಕ್ಕಿಗರಿಗಿದ್ದ ಕಾರ್ಯಭಾರಗಳು ಕಡಿಮೆಯಾಗಿದ್ದರಿಂದ ಈ ಸಂಖ್ಯೆಯನ್ನು ಕಡಿತಗೊಳಿಸಲು ಸರಕಾರ ಉದ್ದೇಶಿಸಿದೆ ಎಂದು ಕೇಳಿಬರುತ್ತಿದೆ. ಈ ರೀತಿ ಮಾಡಿದಲ್ಲಿ ಈಗಾಗಲೇ ಸಂದರ್ಶನ ಮುಗಿಸಿ ನೇಮಕಾತಿ ಆಜ್ಞೆ ಬರಬಹುದೆಂದು ಕಾಯುತ್ತಾ ಕುಳಿತಿರುವವರ ಪರಿಸ್ಥಿತಿ ಏನು ಎಂಬ ಬಗ್ಗೆ ಈ ವಿಚಾರಗಳಲ್ಲಿ ಮಾನ್ಯ ಕಂದಾಯ ಸಚಿವರು ಸರಕಾರದ ನಿಲುವೇನು ಎಂಬ ಬಗ್ಗೆ ತಿಳಿಸಬೇಕೆಂದು ಮಾನ್ಯ ಕಂದಾಯ ಸಚಿವರನ್ನು ಒತ್ತಾಯಿಸುತ್ತೇನೆ.

ಶ್ರೀ ಎಂ. ರಘುಪತಿ.—ಅಧ್ಯಕ್ಷರೇ, ಸಂಬಂಧಪಟ್ಟ ಮಂತ್ರಿಗಳಿಂದ ಉತ್ತರವನ್ನು ತರಿಸಿ ಕೊಡುತ್ತೇನೆ.

೧೪. ಹಂಕ್ಯೇರಿ ತಾಲ್ಲೂಕಿನ ದಡ್ಡಿ ಹಾಗೂ ಕಂರಣಿ ಗ್ರಾಮಂಗಳಲ್ಲಿ ಮಂಜೂರಾಗಿದ್ದ ಹಿಂದುಳಿದ ವಿದ್ಯಾರ್ಥಿನಿಲಯವನ್ನು ಕಟ್ಟದೇ ಇರುವುದು

ಶ್ರೀ ಮಲ್ಲಾರಿಗೌಡ ಎಸ್. ಪಾಟೀಲ್ (ಸಂಕೇಶ್ವರ).—ಹುಕ್ಕೇರಿ ತಾಲ್ಲೂಕಿನ ಸಂಕೇಶ್ವರ ಮತ ಕ್ಷೇತ್ರದ ದಡ್ಡಿ ಹಾಗೂ ಕಂರಣಿ ಗ್ರಾಮದಲ್ಲಿ ಮಂಜೂರಾಗಿರುವ ಹಿಂದುಳಿದ ಜನಾಂಗದ ವಿದ್ಯಾರ್ಥಿಗಳಿಗಾಗಿ ಮಂಜೂರಾಗಿರುವ ವಿದ್ಯಾರ್ಥಿನಿಲಯಗಳನ್ನು ಕಟ್ಟದೆ ಇರುವುದು ಸಾರ್ವಜನಿಕರಲ್ಲಿ ಕುತೂಹಲವನ್ನುಂಟು ಮಾಡಿದೆ. ದಡ್ಡಿಯಲ್ಲಿ ಕಟ್ಟುತ್ತಿರುವ ವಿದ್ಯಾರ್ಥಿನಿಲಯವನ್ನು ಭೂಸೇನಾ ನಿಗಮಕ್ಕೆ ವಹಿಸಿಕೊಡಲಾಗಿದ್ದು ಹಣಕಾಸಿನ ತೊಂದರೆ ಇರುವುದರಿಂದ ಅವರು ಕಟ್ಟುವುದನ್ನು ನಿಲ್ಲಿಸಿರುತ್ತಾರೆ. ಹಣ ಕಾಸಿನ ವ್ಯವಸ್ಥೆ ಬಗ್ಗೆ ಯಾವ ಇಲಾಖೆಗೆ ಸಂದರ್ಶನ ಮಾಡ ಬೇಕಾಗಿದೆ ಎಂಬುದು ತಿಳಿಯಲಾರದ ಸಮಸ್ಯೆಯಾಗಿದೆ. ಕಂರಣಿ ಗ್ರಾಮದಲ್ಲಿ ಕಟ್ಟಬೇಕಾಗಿರುವ ವಿದ್ಯಾರ್ಥಿನಿಲಯದ ಕಟ್ಟಡಕ್ಕೆ ಸ್ಥಳಾವಕಾಶ ಮಾಡಿಕೊಟ್ಟರೂ ಕೂಡ ಕೆಲಸವು ರಾಜಕೀಯ ತೊಂದರೆಯಿಂದ ನಿಂತುಹೋಗಿದೆ. ಈ ಬಗ್ಗೆ ಜಿಲ್ಲಾಪರಿಷತ್ತು, ಬೆಳಗಾವಿ ಇವರಿಗೆ ಕೇಳಿದರೂ ಯಾವುದೇ ನಿರ್ದಿಷ್ಟ ಕ್ರಮ ಕೈಗೊಂಡಿಲ್ಲ. ಸರಕಾರದಲ್ಲಿರುವ ಮಂತ್ರಿಗಳಿಗೆ ಪ್ರಶ್ನೆ ಕೇಳಿದರೆ ವಿಶ್ವಾಮಿತ್ರನ ಹಾಗೆ ಜಿಲ್ಲಾ ಪರಿಷತ್ತಿನ ಕಡೆಗೆ ತಪ್ಪು ದೃಷ್ಟಿಯನ್ನು ಹಾಗೂ ಅಸಹಾಯಕತೆಯನ್ನು ತೋರಿಸುತ್ತಾರೆ. ಇದು ಸಹಜ ಹಾಗೂ ದಿನನಿತ್ಯದ ಕಾರ್ಯವಾಗಿದೆ. ಕಾರಣ ಸಮಾಜ ಕಲ್ಯಾಣ ಮಂತ್ರಿಗಳು ಈ ಬಗ್ಗೆ ಕೂಡಲೇ ಯೋಗ್ಯಕ್ರಮ ಕೈಗೊಂಡು ಈ ಎರಡೂ ಕಟ್ಟಡಗಳನ್ನು ಪೂರ್ತಿಮಾಡುವಂತೆ ಹಣಕಾಸಿನ ವ್ಯವಸ್ಥೆ ಮಾಡಿ ವಿದ್ಯಾರ್ಥಿಗಳು ಅನುಭವಿಸುತ್ತಿರುವ ತೊಂದರೆಯನ್ನು ನಿವಾರಿಸುವುದಕ್ಕಾಗಿ ಸೂಕ್ತ ಕ್ರಮ ಕೈಗೊಳ್ಳುತ್ತಾರೆಂದು ಭಾವಿಸುತ್ತೇನೆ. ಈ ಬಗ್ಗೆ ಸದನದಲ್ಲಿ ಹೇಳಿಕೆಯನ್ನು ಅಪೇಕ್ಷಿಸುತ್ತೇನೆ.

ಶ್ರೀ ಎಂ. ರಘುಪತಿ.—ಮಾನ್ಯ ಮಂತ್ರಿಗಳಿಂದ ಉತ್ತರವನ್ನು ತರಿಸಿಕೊಡುತ್ತೇನೆ.